

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 19-07-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ಸಹ ಬದರೀ ಸಹಾಬರ ಬಗ್ಗೆ ಪ್ರಸ್ತಾಪಿಸಲಾಗುವುದು. ಇಂದು ಪ್ರಸ್ತಾಪಿಸಲಿರುವ ಮೊದಲನೆಯ ಸಹಾಬಿಯ ಹೆಸರು ಹಝ್ರತ್ ಆಮಿರ್ ಬಿನ್ ಸಲ್ಮಾ(ರ). ಅವರು ಬಲಿಯ್ಯ ಗೋತ್ರದವರಾಗಿದ್ದರು. ಈ ಕಾರಣದಿಂದ ಅವರು ಆಮಿರ್ ಬಿನ್ ಸಲಿಮ ಬಲವಿ ಎಂದೂ ಕರೆಯಲ್ಪಡುತ್ತಿದ್ದರು. ಅವರು ಅನ್‌ಸಾರ್‌ಗಳೊಂದಿಗೆ ಪ್ರತಿಜ್ಞಾ ಬದ್ಧರಾಗಿದ್ದರು. ಅವರು ಬದರ್ ಉಹುದ್ ಯುದ್ಧಗಳಲ್ಲಿ ಭಾಗವಹಿಸುವ ಭಾಗ್ಯ ಗಳಿಸಿದ್ದರು.

ಎರಡನೆಯ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ಸುರಾಖ(ರ). ಅವರು ಖುರೈಶರ ಬನೂ ಅದೀ ಗೋತ್ರಕ್ಕೆ ಸೇರಿದವರಾಗಿದ್ದರು. ಆ ಗೋತ್ರ ಉಮರ್ ಬಿನ್ ಖತ್ತಾಬರ ಗೋತ್ರವೂ ಆಗಿತ್ತು. ಅಬ್ದುಲ್ಲಾ ಬಿನ್ ಸುರಾಖರ ಹಿಂದಿನ ಐದನೆಯ ಪೀಳಿಗೆಯಲ್ಲಿ ರೈಹಾನ್ ಎಂಬ ವ್ಯಕ್ತಿಗೆ ತಲಪಿ ಹಝ್ರತ್ ಉಮರ್‌ರೊಂದಿಗೆ ಮತ್ತು ಹಿಂದಿನ ಹತ್ತನೆಯ ಪೀಳಿಗೆಯಲ್ಲಿ ಕಅಬ್ ಎಂಬ ವ್ಯಕ್ತಿಗೆ ತಲಪಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅವರ ವಂಶಾವಳಿ ಮಿಲನಗೊಳ್ಳುತ್ತದೆ.

ಹಝ್ರತ್ ಅಬ್ದುಲ್ಲಾ ಬಿನ್ ಸುರಾಖ ತನ್ನ ಸಹೋದರ ಅಮರ್ ಜೊತೆಗೆ ಮಕ್ಕದಿಂದ ಮದೀನಕ್ಕೆ ಹಿಜ್‌ರತ್ ಮಾಡಿದರು. ಅವರಿಬ್ಬರು ಹಝ್ರತ್ ರಿಫಾಅ ಬಿನ್ ಅಬ್ದುಲ್ ಮುಂಝಿರ್‌ರ ಮನೆಯಲ್ಲಿ ವಾಸಿಸಿದರು. ಅವರು ಹಝ್ರತ್ ಉಸ್ಮಾನರ ಖಿಲಾಫತ್ ಕಾಲದಲ್ಲಿ ಹಿಜರಿ ವರ್ಷ 35ರಲ್ಲಿ ನಿಧನ ಹೊಂದಿದರು. ಹಝ್ರತ್ ಅಬ್ದುಲ್ಲಾ ಬಿನ್ ಸುರಾಖ ಹೀಗೆ ವರದಿ ಮಾಡಿದ್ದಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: **ತಸಹ್ಹರೂ ವಲವ್ ಬಿಲ್‌ಮಾಇ** ನೀವು ಸಹ್ರಿ ಸಮಯ ನೀರನ್ನಾದರೂ ಕುಡಿಯಬೇಕು. ಎಂದರೆ ಸಹ್ರಿ ಸಮಯ ತಿನ್ನುವುದು ಅಥವಾ ಕುಡಿಯುವುದು ಕಡ್ಡಾಯವಾಗಿದೆ ಎಂದು ತಾತ್ಪರ್ಯ.

ಮುಂದೆ ಪ್ರಸ್ತಾಪಿಸಲಿರುವ ಸಹಾಬಿಯ ಹೆಸರು ಹಝ್ರತ್ ಮಾಲಿಕ್ ಬಿನ್ ಅಬೂ ಖೂಲಿ(ರ). ಅವರು ಬನೂ ಅಜನ್ ಗೋತ್ರದವರಾಗಿದ್ದರು. ಹಝ್ರತ್ ಮಾಲಿಕ್ ತನ್ನ ಇಬ್ಬರು ಸಹೋದರರಾದ ಹಝ್ರತ್ ಹಿಲಾಲ್ ಮತ್ತು ಹಝ್ರತ್ ಅಬ್ದುಲ್ಲಾರೊಂದಿಗೆ ಬದರ್ ಯುದ್ಧದಲ್ಲಿ ಭಾಗವಹಿಸಿದರು. ಅವರು ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು. ಮುಂದಿನ ಸಹಾಬಿ ಹಝ್ರತ್ ವಾಖಿದ್ ಬಿನ್ ಅಬ್ದುಲ್ಲಾ(ರ). ಅವರು ಬನೂ ತಮೀಮ್ ಗೋತ್ರದವರಾಗಿದ್ದರು. ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರ ತಬ್ಲೀಗಿ ಪರಿಶ್ರಮಗಳ ಫಲವಾಗಿ ಅವರು ಇಸ್ಲಾಂ ಧರ್ಮ ಸ್ವೀಕರಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಾರ್ ಅರ್‌ಖಮ್‌ಗೆ ಹೋಗುವ ಮೊದಲೇ ಹಝ್ರತ್ ವಾಖಿದ್ ಮುಸ್ಲಿಮರಾಗಿದ್ದರು.

ದಾರ್ ಅರ್‌ಖಮ್ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದಲ್ಲಿ ಒಂದು ತಬ್ಲೀಗಿ ಕೇಂದ್ರ ಸ್ಥಾಪಿಸಲು ಯೋಚಿಸಿದರು. ಅಲ್ಲಿಗೆ ಮುಸ್ಲಿಮರು ಜಮಾಯಿಸಲು, ನಮಾಝ್ ಮಾಡಲು ಮತ್ತು ಯಾವುದೇ ತಡೆಯಿಲ್ಲದೆ ತರಬೇತಿಗೆ ಸಂಬಂಧಿಸಿ ಮುಸ್ಲಿಮರು ಮಾರ್ಗದರ್ಶನ ಪಡೆಯಲು ಮತ್ತು ತಬ್ಲೀಗ್ ಮಾಡಲು ಅನುಕೂಲವಾಗುವಂತೆ ಮಾಡಲು ನಿರ್ಧರಿಸಿದರು. ಅದಕ್ಕೋಸ್ಕರ ಒಂದು ಮನೆಯ ಆವಶ್ಯಕತೆ ಇತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಬ್ಬ ನವ ಮುಸ್ಲಿಮನಾದ ಅರ್‌ಖಮ್ ಬಿನ್ ಅಬೀ ಅರ್‌ಖಮರ ಮನೆಯನ್ನು ಅದಕ್ಕೋಸ್ಕರ ಇಷ್ಟಪಟ್ಟರು. ಅದು ಸಫಾ ಪರ್ವತದ ಬದಿಯಲ್ಲಿತ್ತು. ಅನಂತರ ಮುಸ್ಲಿಮರು ಅಲ್ಲಿಯೇ ಜಮಾಯಿಸುತ್ತಿದ್ದರು. ಅಲ್ಲಿಯೇ ನಮಾಝ್ ನಿರ್ವಹಿಸುತ್ತಿದ್ದರು. ಸತ್ಯಾನ್ವೇಷಿಗಳಾದ ಜನರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅಲ್ಲಿಯೇ ಭೇಟಿಯಾಗುತ್ತಿದ್ದರು. ಅವರಿಗೆ ಅಲ್ಲಿಯೇ ತಬ್ಲೀಗ್ ಮಾಡಲಾಗುತ್ತಿತ್ತು. ಈ ಕಾರಣದಿಂದ ಈ ಮನೆ ಚರಿತ್ರೆಯಲ್ಲಿ ವಿಶಿಷ್ಟ ಪ್ರಸಿದ್ಧಿ ಗಳಿಸಿತು. ಅದು ದಾರುಲ್ ಇಸ್ಲಾಮ್ ಎಂಬ ಹೆಸರಿನಲ್ಲಿಯೂ ಪ್ರಸಿದ್ಧವಾಗಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಂದಾಜು ಮೂರು ವರ್ಷಗಳ ಕಾಲ ಅಲ್ಲಿ ಕಾರ್ಯನಿರತರಾಗಿದ್ದರು. ದಾರ್ ಅರ್‌ಖಮ್‌ನಲ್ಲಿ ಮುಸ್ಲಿಮರಾದ ಕೊನೆಯ ವ್ಯಕ್ತಿ ಹಝ್ರತ್ ಉಮರ್(ರ) ಆಗಿದ್ದರು ಎಂದು ಚರಿತ್ರೆಗಾರರು ಬರೆದಿದ್ದಾರೆ. ಅವರು ಮುಸ್ಲಿಮರಾದ ನಂತರ ಮುಸ್ಲಿಮರಿಗೆ ಬಹಳ ಶಕ್ತಿ ಲಭಿಸಿತು. ಅವರು ದಾರ್ ಅರ್‌ಖಮ್‌ನಿಂದ ಹೊರಟು ಹೊರಗೆ ಬಹಿರಂಗವಾಗಿ ತಬ್ಲೀಗ್ ಮಾಡಲು ಪ್ರಾರಂಭಿಸಿದರು. ಹಝ್ರತ್ ವಾಖಿದ್ ಹಝ್ರತ್ ಉಮರ್(ರ)ರೊಂದಿಗೆ ಮಕ್ಕದಿಂದ ಮದೀನಕ್ಕೆ ಹಿಜ್‌ರತ್ ಮಾಡಿದರು. ಮದೀನಕ್ಕೆ ತಲಪಿ ಅವರು ಹಝ್ರತ್ ರಿಫಾಅ್ ಬಿನ್ ಅಬ್ದುಲ್ ಮುಂಝಿರ್ ಮನೆಯಲ್ಲಿ ವಾಸಿಸಿದರು. ಹಝ್ರತ್ ವಾಖಿದ್, ಹಝ್ರತ್ ಉಮರ್‌ರವರ ಖಿಲಾಫತಿನ ಆರಂಭ ಕಾಲದಲ್ಲಿ ನಿಧನ ಹೊಂದಿದರು.

ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ನಸರ್ ಬಿನ್ ಹಾರಿಸ್(ರ). ಅವರು ಅನ್‌ಸಾರ್‌ಗಳ ಗೋತ್ರವಾದ ಔಸ್‌ಗೆ ಸೇರಿದ ಬನೂ ಅಬ್ದು ಬಿನ್ ರಝ್ಝಾಖ್ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರ ತಂದೆಯ ಹೆಸರು ಹಾರಿಸ್ ಬಿನ್ ಅಬ್ದ್. ತಾಯಿಯ ಹೆಸರು ಸೌದ ಬಿನ್ತ್ ಸುವಾದ್. ಹಝ್ರತ್ ನಸರ್‌ರವರ ಪಿತ ಹಾರಿಸ್(ರ) ಸಹ ಸಹಾಬಿಯಾಗಿದ್ದರು. ಹಝ್ರತ್ ನಸರ್ ಖಾದಿಸಿಯ ಯುದ್ಧದಲ್ಲಿ ಶಹೀದರಾದರು. ಹಿಜರಿ ವರ್ಷ 14ರಲ್ಲಿ, ಹಝ್ರತ್

ಉಮರ್(ರ)ರ ಖಿಲಾಫತ್ ಕಾಲದಲ್ಲಿ ಖಾದಿಸಿಯ ಎಂಬ ಸ್ಥಳದಲ್ಲಿ ಇರಾನಿನ ಸೇನೆಯ ವಿರುದ್ಧ ಒಂದು ನಿರ್ಣಾಯಕ ಯುದ್ಧ ನಡೆಸಲಾಗಿತ್ತು. ಅದರ ಫಲ ಸ್ವರೂಪವಾಗಿ ಇರಾನಿನ ರಾಜ್ಯಭಾರ ಮುಸ್ಲಿಮರ ಸ್ವಾಧೀನಕ್ಕೆ ಬಂತು.

ಇನ್ನೊಬ್ಬ ಸಹಾಬಿ ಹಝ್ರತ್ ಮಾಲಿಕ್ ಬಿನ್ ಅಮರ್(ರ). ಅವರು ಬನೂ ಸಲೀಮ್ ಗೋತ್ರದ ಬನೂ ಹಿಜರ್ ಕುಟುಂಬಕ್ಕೆ ಸೇರಿದ್ದರು. ಅವರ ತಂದೆಯ ಹೆಸರು ಅಮರ್ ಬಿನ್ ಸಮೀರ್. ಹಝ್ರತ್ ಮಾಲಿಕ್ ತನ್ನ ಇಬ್ಬರು ಸಹೋದರರಾದ ಹಝ್ರತ್ ಸಖಫ್ ಬಿನ್ ಅಮರ್ ಮತ್ತು ಹಝ್ರತ್ ಮದ್‌ಲಜ್ ಬಿನ್ ಅಮರ್ ಜೊತೆಗೆ ಬದರ್ ಯುದ್ಧದಲ್ಲಿ ಭಾಗವಹಿಸಿದರು. ಅವರು ಹಿಜರಿ 12ರಲ್ಲಿ ಯಮಾಮ ಯುದ್ಧದಲ್ಲಿ ಶಹೀದರಾದರು. ಇನ್ನೊಬ್ಬ ಸಹಾಬಿ ಹಝ್ರತ್ ನುಅ್‌ಮಾನ್ ಬಿನ್ ಅಸರ್(ರ). ಅವರು ಅನ್‌ಸಾರ್ ಗೋತ್ರ ಬಲಿಯ್ಯಿಗೆ ಸೇರಿದವರು. ಅವರು ಬೈಅತೆ ಅಖಬದಲ್ಲಿಯೂ ಬದರ್ ಯುದ್ಧದಲ್ಲಿಯೂ ಇತರ ಎಲ್ಲಾ ಯುದ್ಧಗಳಲ್ಲಿಯೂ ಭಾಗವಹಿಸಿದ್ದರು. ಅವರು ಯಮಾಮ ಯುದ್ಧದಲ್ಲಿ ಶಹೀದರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಅವೀಮ್ ಬಿನ್ ಸಾಯಿದ(ರ). ಅವರು ಔಸ್ ಗೋತ್ರದ ಬನೂ ಅಮರ್ ಬಿನ್ ಔಫ್ ಶಾಖೆಗೆ ಸೇರಿದವರಾಗಿದ್ದರು. ಅವರು ಬೈಅತೆ ಅಖಬ ಊಲಾ ಮತ್ತು ಸಾನಿಯದಲ್ಲಿ ಭಾಗವಹಿಸಿದ್ದರು. ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆದಿದೆ: ಬೈಅತೆ ಅಖಬ ಊಲಾಕ್ಕೆ ಮೊದಲು ಮದೀನದ ಅನ್‌ಸಾರ್‌ಗಳ ಒಂದು ಗುಂಪು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಿದ್ದರು. ಅವರಲ್ಲಿ ಹಝ್ರತ್ ಅವೀಮ್ ಬಿನ್ ಸಾಯಿದ ಸೇರಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಝುಬೈರ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದರು: ಅವೀಮ್ ಬಿನ್ ಸಾಯಿದ ಅಲ್ಲಾಹನ ದಾಸರ ಪೈಕಿ ಎಷ್ಟು ಉತ್ತಮ ದಾಸರಾಗಿದ್ದಾರೆ. ಅವರು ಯುದ್ಧವೀರರಲ್ಲೂ ಒಬ್ಬರಾಗಿದ್ದಾರೆ. ಇನ್ನೊಂದು ವರದಿಯಲ್ಲಿ ಹೀಗೆ ಹೇಳಲಾಗಿದೆ: ಪವಿತ್ರ ಖುರ್‌ಆನಿನ ವಚನ **ಫೀಹಿ ರಿಜಾಲುನ್ ತುಹಿಬ್ಬೂನ ಅನ್ ಯತ ತಹ್ಹರೂ, ವಲ್ಲಾಹು ಯುಹಿಬ್ಬುಲ್ ಮುತ್ತಹ್ಹಿರೀನ್.** ಅಲ್ಲಿ ಪರಿಶುದ್ಧರಾಗಲು ಬಯಸುವ ಜನರಿದ್ದಾರೆ. ಪರಿಶುದ್ಧರನ್ನು ಅಲ್ಲಾಹನು ಪ್ರೀತಿಸುತ್ತಾನೆ. (9:108). ಈ ವಚನ ಅವತೀರ್ಣವಾದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅವೀಮ್ ಬಿನ್ ಸಾಯಿದ ಇಂತಹ ಜನರಲ್ಲಿ ಸೇರಿದವರಾದ ಉತ್ತಮ ದಾಸರಾಗಿದ್ದಾರೆ.

ಹಝ್ರತ್ ಅವೀಮ್ ಬಿನ್ ಸಾಯಿದರವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಭಾಗವಹಿಸಿದರು. ಆಸಿಮ್ ಬಿನ್ ಸವೀದ್ ವರದಿ ಮಾಡುತ್ತಾರೆ: ಹಝ್ರತ್ ಅವೀಮ್ ಬಿನ್ ಸಾಯಿದರ ಪುತ್ರಿ ಹೀಗೆ ಹೇಳಿದುದಾಗಿ ಆಲಿಸಿದೆ: ಹಝ್ರತ್ ಉಮರ್ ಬಿನ್ ಖತ್ತಾಬ್ ಹಝ್ರತ್ ಅವೀಮ್ ಬಿನ್ ಸಾಯಿದರ ಗೋರಿಯ ಬಳಿ ನಿಂತಾಗ ಹೇಳಿದರು. ಲೋಕದಲ್ಲಿರುವ ಯಾರೂ ಈ ಖಬರಿನೊಳಗೆ ದಫನ್‌ಗೊಂಡವರಿಗಿಂತ ಉತ್ತಮನೆಂದು ಹೇಳಲು ಸಾಧ್ಯವಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ಪತಾಕೆಯನ್ನು ಹಾರಿಸಿದಾಗಲೆಲ್ಲಾ ಅವೀಮ್ ಅದರ ನೆರಳಡಿಯಲ್ಲಿ ಇರುತ್ತಿದ್ದರು. ಉಹುದ್ ಯುದ್ಧದ ಸಂದರ್ಭದಲ್ಲಿ ಹಾರಿಸ್ ಬಿನ್ ಸವೀದ್ ಎಂಬವನು ಹಝ್ರತ್ ಮುಜ್‌ಝುರ್ ಬಿನ್ ಝಿಯಾದರನ್ನು ಶಹೀದರನ್ನಾಗಿ ಮಾಡಿದ್ದನು. ಹಝ್ರತ್ ಮುಜ್‌ಝುರ್ ಬಿನ್ ಝಿಯಾದರು ಅಜ್ಞಾನ ಕಾಲದಲ್ಲಿ ಹಾರಿಸನ ಪಿತ ಸವೀದರನ್ನು ಕೊಂದಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮದೀನಕ್ಕೆ ಆಗಮಿಸಿದಾಗ ಹಾರಿಸ್ ಮತ್ತು ಮುಜ್‌ಝುರ್ ಇಬ್ಬರೂ ಮುಸ್ಲಿಮರಾದರು. ಆದರೆ ಹಾರಿಸ್ ಯಾವಾಗಲೂ ಮುಜ್‌ಝುರ್‌ರನ್ನು ಕೊಲ್ಲುವ ಯೋಚನೆ ಹೊಂದಿದ್ದನು. ಉಹುದ್ ಯುದ್ಧದ ಕಾಲದಲ್ಲಿ ಹಾರಿಸ್ ಅನುಕೂಲ ಸಂದರ್ಭ ಲಭಿಸಿದಾಗ ಮುಜ್‌ಝುರ್‌ರನ್ನು ಶಹೀದರನ್ನಾಗಿ ಮಾಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅವೀಮ್ ಬಿನ್ ಸಾಯಿದರೊಂದಿಗೆ ಹಾರಿಸನನ್ನು ಹತ್ಯೆ ಮಾಡಲು ಹೇಳಿದರು. ಹಝ್ರತ್ ಅವೀಮ್‌ರವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತ ಕಾಲದಲ್ಲಿಯೇ ನಿಧನ ಹೊಂದಿದರು.

ಇನ್ನೊಬ್ಬ ಸಹಾಬಿ ಹಝ್ರತ್ ನುಅ್‌ಮಾನ್ ಬಿನ್ ಸಿನಾನ್(ರ). ಅವರು ಅನ್‌ಸಾರ್‌ಗಳ ಖಝ್ರಜ್ ಗೋತ್ರದ ಬನೂ ನುಅ್‌ಮಾನ್ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸುವ ಭಾಗ್ಯ ಗಳಿಸಿದರು. ಇನ್ನೊಬ್ಬ ಸಹಾಬಿ ಹಝ್ರತ್ ಉನ್‌ತರ ಮೌಲಾ ಸಲೀಮ್(ರ). ಅವರು ಬದರ್ ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಉಹುದ್ ಯುದ್ಧದಲ್ಲಿ ಶಹೀದರಾದರು. ಇನ್ನೊಂದು ವರದಿ ಪ್ರಕಾರ ಹಝ್ರತ್ ಅಲಿಯವರ(ರ) ಖಿಲಾಫತ್ ಕಾಲದಲ್ಲಿ ಸಿಫ್ಫೀನ್ ಯುದ್ಧದಲ್ಲಿ ಹಿಜರಿ 37ರಲ್ಲಿ ಶಹೀದರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ನುಅ್‌ಮಾನ್ ಬಿನ್ ಅಬ್ದು ಅಮರ್(ರ). ಅವರು ಖಝ್ರಜ್ ಗೋತ್ರದ ಬನೂ ದೀನಾರ್ ಬಿನ್ ನಜ್ಜಾರ್ ಶಾಖೆಗೆ ಸೇರಿದವರಾಗಿದ್ದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿ ಶಹೀದರಾದರು. ಹಝ್ರತ್ ನುಅ್‌ಮಾನರ ಸಹೋದರರಾದ ಹಝ್ರತ್ ಝುಹ್ಹಾಕ್ ಮತ್ತು ಹಝ್ರತ್ ಖುತ್‌ಬ ಸಹ ಸಹಾಬರಾಗಿದ್ದರು. ಬಿಅ್‌ರ್ ಮಊನ ಘಟನೆಯಲ್ಲಿ ಹಝ್ರತ್ ಖುತ್‌ಬ ಶಹೀದರಾದರು. ಮುಹಮ್ಮದ್ ಬಿನ್ ಸಅದ್ ಬಿನ್ ಅಬೀ ದಖಾಸ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬನೂ ದೀನಾರ್ ಶಾಖೆಗೆ ಸೇರಿದ ಒಬ್ಬ ಮಹಿಳೆಯ ಸಮೀಪದಿಂದ ದಾಟಿ ಹೋಗುತ್ತಿದ್ದರು. ಆ ಮಹಿಳೆಯ ಪತಿ, ಸಹೋದರ ಮತ್ತು ಪಿತ ಉಹುದ್ ಯುದ್ಧದಲ್ಲಿ ಭಾಗವಹಿಸಿ ಶಹೀದರಾಗಿದ್ದರು. ಆ ಮಹಿಳೆಯೊಂದಿಗೆ ಜನರು ಸಂತಾಪ ಸೂಚಿಸಿದಾಗ ಆಕೆ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಿತಿ ಹೇಗಿದೆ? ಜನರು ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕ್ಷೇಮದಿಂದಿದ್ದಾರೆ. ಅಲ್‌ಹಮ್‌ದುಲಿಲ್ಲಾಹ್ ನೀವು ಇಚ್ಛಿಸಿರುವ ಹಾಗೆ ಅವರು

ಚೆನ್ನಾಗಿದ್ದಾರೆ. ಆಗ ಆ ಮಹಿಳೆ ಹೇಳಿದರು: ನನಗೆ ಅವರನ್ನು ತೋರಿಸಿರಿ ನಾನು ಅವರನ್ನು ನೋಡಲು ಬಯಸುತ್ತೇನೆ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಡೆಗೆ ಸೂಚಿಸಿ ತೋರಿಸಲಾಯಿತು. ಆ ಮಹಿಳೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನೋಡಿ ಹೇಳಿದರು: ಅವರು ಜೀವಿಸಿರುವಾಗ ಇತರ ಎಲ್ಲಾ ವಿಪತ್ತುಗಳು ಸಾಮಾನ್ಯವಾದವುಗಳಾಗಿವೆ. ಒಂದು ವರದಿಯಲ್ಲಿ ಈ ಮಹಿಳೆಯ ಪುತ್ರ ಸಹ ಶಹೀದರಾದರೆಂದು ಪ್ರಸ್ತಾಪಿಸಲಾಗಿದೆ. ಆ ಮಹಿಳೆಯ ಹೆಸರು ಸುಮೈರ ಬಿನ್ತ್ ಖೈಸ್. ಹಝ್ರತ್ ನುಅ್‌ಮಾನ್ ಬಿನ್ ಅಬ್ದು ಅಮರ್ ಅವರ ಪುತ್ರರಾಗಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಸಂದರ್ಭದಲ್ಲಿ ಈ ಘಟನೆಯನ್ನು ಪ್ರಸ್ತಾಪಿಸಿದ್ದಾರೆ. ನಾನು ಸಹ ಹಲವು ಸಾರಿ ಇದರ ಉದಾಹರಣೆಯನ್ನು ನೀಡಿದ್ದೇನೆ. ಇದು ಪ್ರತಿಯೊಂದು ಸಭೆಯಲ್ಲಿ ಜನರಿಗೆ ಕೇಳಿಸಬೇಕಾದುದೇ ಆಗಿದೆ. ಯಾವಾಗಲೂ ಆ ಘಟನೆಯನ್ನು ನೆನಪಿನಲ್ಲಿರಿಸಬೇಕು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಇದು ಎಂತಹ ಮಹತ್ತರವಾದ ಉದಾಹರಣೆ ಎಂದರೆ ಲೋಕದ ಚರಿತ್ರೆಯಲ್ಲಿ ಇದಕ್ಕೆ ಸಮಾನವಾದ ಯಾವ ಘಟನೆಯನ್ನೂ ಕಾಣಲು ಸಾಧ್ಯವಿಲ್ಲ. ಇಂತಹ ಜನರ ಬಗ್ಗೆಯೇ ಹೀಗೆ ಹೇಳಲಾಗಿದೆ: **ಮಿನ್‌ಹುಮ್ ಮನ್ ಖದ್ಝಾ ನಹ್‌ಬಹೂ** ಅವರಲ್ಲಿ ಕೆಲವರು ತಮ್ಮ ಪ್ರತಿಜ್ಞೆಗಳನ್ನು ಈಡೇರಿಸಿದ್ದಾರೆ.(33:24). ಈ ಮಾತು ಅಂತಹ ಜನರ ಬಗ್ಗೆ ಅಲ್ಲದೆ ಬೇರೆ ಯಾರ ಬಗ್ಗೆ ಹೇಳಲು ಸಾಧ್ಯ? ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನಾನು ಆ ಮಹಿಳೆಗೆ ಸಂಬಂಧಿಸಿದ ಘಟನೆಯನ್ನು ಓದುವಾಗ ನನ್ನ ಹೃದಯ ಆ ಮಹಿಳೆ ಬಗ್ಗೆ ಗೌರವದಿಂದ ತುಂಬುತ್ತದೆ. ನಾನು ಆ ಪವಿತ್ರ ಮಹಿಳೆಯ ಬಟ್ಟೆಯ ಅಂಚನ್ನು ಸ್ಪರ್ಶಿಸಿ ಆ ಕೈಯ್ಯನ್ನು ಕಣ್ಣಿಗೆ ತಾಗಿಸಲು ಇಚ್ಛಿಸುತ್ತೇನೆ. ಆ ಮಹಿಳೆ ನನ್ನ ಪ್ರಿಯ ಪೈಗಂಬರರ(ಸ) ಬಗ್ಗೆ ತನಗಿರುವ ಪ್ರೀತಿಯ ಅಪ್ರತಿಮ ಸ್ಮರಣೆಯನ್ನು ಬಿಟ್ಟು ಹೋಗಿದ್ದಾರೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಹಾಬರ ಹೃದಯಗಳಲ್ಲಿ ಎಂತಹ ಪ್ರೇಮವನ್ನು ಹುಟ್ಟಿಸಿದ್ದರೆಂದರೆ ಆ ಸಹಾಬರಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಎದುರಿಗೆ ಯಾವುದೇ ವಸ್ತುವಿನ ಬಗ್ಗೆ ಕಾಳಜಿ ಇರಲಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನಿಗೆ ಪ್ರಿಯರಾದವರು ಎಂಬ ಕಾರಣದಿಂದ ಆ ಪ್ರೇಮ ಉದ್ಭವಿಸಿತ್ತು. ಆ ಸಹಾಬರು ಅಲ್ಲಾಹನ ಪ್ರೇಮಿಗಳಾಗಿದ್ದರು. ಅಲ್ಲಾಹನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುತ್ತಾ ಇದ್ದುದರಿಂದ ಅವರ ಸಹಾಬರು ಅವರನ್ನು ಪ್ರೀತಿಸುತ್ತಿದ್ದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಅನಂತರ ಆ ಮಹಿಳೆಗೆ ಸಂಬಂಧಿಸಿದ ಘಟನೆಯನ್ನು ವಿವರಿಸಿ ನಂತರ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಅಲ್ಲಾಹನು ಅವರ ಹೃದಯಗಳಲ್ಲಿ ಸೃಷ್ಟಿಸಿದ ಪ್ರೀತಿ ಆ ರೀತಿ ಇತ್ತು. ಹೀಗಿದ್ದರೂ ಸಹಾಬರು ಪ್ರತಿಯೊಂದು ವಸ್ತುಗಳ ಮೇಲೆ ಅಲ್ಲಾಹನಿಗೆ ಆದ್ಯತೆ ನೀಡುತ್ತಿದ್ದರು. ಅವರ ಈ ಏಕದೇವ ವಿಶ್ವಾಸ (ತೌಹೀದ್) ಅವರನ್ನು ಲೋಕದಲ್ಲಿ ಪ್ರತಿಯೊಂದು ಸ್ಥಳದಲ್ಲಿ ಜಯಶಾಲಿಗಳನ್ನಾಗಿ ಮಾಡಿತ್ತು. ಅಲ್ಲಾಹನ ಎದುರಿಗೆ ಅವರು ತಮ್ಮ ತಂದೆ ತಾಯಂದಿರನ್ನು ಗಮನಿಸುತ್ತಿರಲಿಲ್ಲ. ಸಹೋದರ ಸಹೋದರಿಯರ ಬಗ್ಗೆ ಗಮನಿಸುತ್ತಿರಲಿಲ್ಲ. ಪತಿ ಪತ್ನಿಯರನ್ನೂ ಗಮನಿಸುತ್ತಿರಲಿಲ್ಲ. ಅವರ ಮುಂದೆ ಒಂದೇ ಒಂದು ಧ್ಯೇಯವಿತ್ತು. ಅವರ ಅಲ್ಲಾಹನು ಅವರಿಂದ ಸಂಪ್ರೀತವಾಗಲಿ ಎಂದು. ಇದೇ ಕಾರಣದಿಂದ ಅಲ್ಲಾಹನು ಅವರ ಬಗ್ಗೆ ರಝಿಯಲ್ಲಾಹು ಅನ್‌ಹುಮ್ (ಅಲ್ಲಾಹನು ಅವರಿಂದ ಸಂಪ್ರೀತನಾದನು) ಎಂದು ಹೇಳಿದ್ದಾನೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಪುನಃ ಹೇಳುತ್ತಾರೆ: ಅನಂತರದ ಕಾಲಗಳಲ್ಲಿ ಮುಸ್ಲಿಮರ ಸ್ಥಿತಿ ಆ ರೀತಿ ಮುಂದುವರಿಯಲಿಲ್ಲ. ಈಗ ಅವರಿಗೆ ಅಲ್ಲಾಹನೊಂದಿಗೆ ಸಂಬಂಧ ಇರುವುದಾದರೆ ಅದು ಕೇವಲ ಬೌದ್ಧಿಕವಾಗಿ ಮಾತ್ರ ಇದೆ. ಅವರು ಮನಸ್ಸಿನಲ್ಲಿ ನಿಶ್ಚಯವಾಗಿಯೂ ಅಲ್ಲಾಹನನ್ನು ನಂಬುತ್ತಾರೆ. ತೌಹೀದ್ ಬಗ್ಗೆ ಹೇಳುತ್ತಾರೆ. ಆದರೆ ಅವರ ಹೃದಯದಲ್ಲಿ ಆ ವಿಶ್ವಾಸ ಇಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುರಿತು ಅವರ ಮುಂದೆ ಪ್ರಸ್ತಾಪಿಸಿದರೆ ಅವರ ಹೃದಯಗಳಲ್ಲಿ ಪ್ರೀತಿಯ ತಂತಿಗಳು ಅಲುಗಾಡಲು ತೊಡಗುತ್ತವೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಂಬಧಿಕರ ಬಗ್ಗೆ ಪ್ರಸ್ತಾಪಿಸುವಾಗಲೂ ತಂತಿಗಳು ಅಲುಗಾಡುತ್ತವೆ. ಶಿಯಾ ಮತ್ತು ಸುನ್ನಿಗಳು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಂತಾನಗಳ ಬಗ್ಗೆ ಪ್ರಸ್ತಾಪಿಸುವಾಗ ಉದ್ವೇಗಭರಿತರಾಗುತ್ತಾರೆ. ಆದರೆ ಅಲ್ಲಾಹನ ಬಗ್ಗೆ ಪ್ರಸ್ತಾಪಿಸುವಾಗ ಮುಸ್ಲಿಮರ ಹೃದಯ ತಂತಿಗಳು ಅಲುಗಾಡುವುದಿಲ್ಲ. ವಾಸ್ತವಿಕ ವಿಷಯವೇನೆಂದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೆಂಬ ಅನುಗ್ರಹೀತರನ್ನು ನಮಗೆ ನೀಡಿರುವವನು ಅಲ್ಲಾಹನೇ ಆಗಿದ್ದಾನೆ. ಆದುದರಿಂದ ಅಲ್ಲಾಹನ ನಾಮಸ್ಮರಣೆಯಿಂದಲೂ ನಮ್ಮ ಹೃದಯಗಳಲ್ಲಿ ಅಂತಹ ಭಾವೋದ್ವೇಗ ತಲೆದೋರಬೇಕು. ಏಕೆಂದರೆ ವಾಸ್ತವಿಕ ಅಭಿವೃದ್ಧಿ ಅಲ್ಲಾಹನನ್ನು ಪ್ರೀತಿಸುವ ಮೂಲಕವೇ ಲಭಿಸುವುದು. ತೌಹೀದ್ ಮೇಲೆ ನೆಲೆನಿಲ್ಲುವುದರಿಂದಲೇ ಅಭಿವೃದ್ಧಿ ಲಭಿಸುವುದು. ಈ ಮೂಲಭೂತ ತತ್ವವನ್ನು ನಮ್ಮಲ್ಲಿ ಪ್ರತಿಯೊಬ್ಬನು ನೆನಪಿನಲ್ಲಿರಿಸಬೇಕು. ಅಲ್ಲಾಹನು ನಮ್ಮೊಳಗೆ ಅಲ್ಲಾಹನ ಬಗ್ಗೆ ಮತ್ತು ಅವನ ಸಂದೇಶವಾಹಕರ ಬಗ್ಗೆ ನೈಜ ಪ್ರೀತಿ ಮತ್ತು ಸರಿಯಾದ ತಿಳುವಳಿಕೆ ಹುಟ್ಟುವಂತೆ ಮಾಡಲಿ – ಆಮೀನ್.

ಈಗ ನಾನು ಕೆಲವು ನಿಧನ ಹೊಂದಿದವರ ಬಗ್ಗೆ ಪ್ರಸ್ತಾಪಿಸುವೆನು ಮತ್ತು ಅವರ ಜನಾಝ ನಮಾಝ್ ನಿರ್ವಹಿಸುವೆನು. ಮೊದಲನೆಯದು ಕರಾಚಿಯ ಅಮೀರ್ ಜಮಾಅತ್ ಮುಕರ್ರಮ್ ಮೌದೂದ್ ಅಹ್ಮದ್ ಸಾಹಿಬ್. ಅವರು ಮುಕರ್ರಮ್ ನವಾಬ್ ಮಸ್‌ಊದ್ ಅಹ್ಮದ್ ಖಾನ್ ಸಾಹಿಬರ ಪುತ್ರರಾಗಿದ್ದರು. ಜುಲಾಯಿ 14ರಂದು ಅವರು ತನ್ನ 74ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** 1941 ಎಪ್ರಿಲ್ ದಿನಾಂಕ

12ರಂದು ಖಾದಿಯಾನ್‌ನಲ್ಲಿ ಮುಕರ್ರಮ್ ಮಸ್‌ಊದ್ ಅಹ್ಮದ್ ಖಾನ್ ಸಾಹಿಬ್ ಮತ್ತು ಸಾಹಿಬ್‌ಝಾದಿ ತಯ್ಯಿಬ ಸಿದ್ದೀಖ ಸಾಹಿಬರ ಪುತ್ರನಾಗಿ ಜನಿಸಿದರು. ಅವರು ಹಝ್ರತ್ ನವಾಬ್ ಮುಬಾರಕ ಬೇಗಮ್ ಸಾಹಿಬ ಮತ್ತು ಹಝ್ರತ್ ನವಾಬ್ ಮುಹಮ್ಮದ್ ಅಲಿಖಾನ್ ಸಾಹಿಬರ ಮೊಮ್ಮಗನಾಗಿದ್ದರು. ಹಝ್ರತ್ ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬರು ಅವರ ತಾಯಿಯ ಕಡೆಯಿಂದ ಅಜ್ಜನಾಗಿದ್ದರು. ಅವರು ಪತ್ನಿ, ಒಬ್ಬ ಪುತ್ರ ಮತ್ತು ಒಬ್ಬ ಪುತ್ರಿಯನ್ನು ಅಗಲಿ ಹೋಗಿದ್ದಾರೆ. ಬಹಳ ಸರಳ ಸ್ವಭಾವಿಯೂ ಸದ್ಗುಣ ಸಂಪನ್ನರೂ ಸಹಾನುಭೂತಿಯುಳ್ಳವರೂ ವಾತ್ಸಲ್ಯ ಭರಿತರೂ ಆಗಿದ್ದರು. ಅವರ ಪುತ್ರ ಹೇಳುತ್ತಾರೆ: ನನ್ನೊಂದಿಗೆ ಮತ್ತು ನನ್ನ ಸಹೋದರಿಯೊಂದಿಗೆ ಮತ್ತು ಮಕ್ಕಳೊಂದಿಗೆ ಸಹ ಹೇಳುತ್ತಿದ್ದರು, ವಾರದಲ್ಲಿ ಒಮ್ಮೆ ನೀವು ನಿಶ್ಚಯವಾಗಿ ಖಲೀಫರಿಗೆ ಪತ್ರ ಬರೆಯಬೇಕು ಮತ್ತು ಅವರೊಂದಿಗೆ ಸಂಬಂಧವನ್ನು ವರ್ಧಿಸಬೇಕು ಎಂದು. ಅವರ ಪತ್ನಿ ಹೇಳುತ್ತಾರೆ: ಚಂದವನ್ನು ನೀಡುವುದರಲ್ಲಿ ಬದ್ಧರಾಗಿದ್ದರು. ಅವರ ಪುತ್ರಿ ಹೇಳುತ್ತಾರೆ: ಅಲ್ಲಾಹನ ಬಗ್ಗೆ ದೃಢವಿಶ್ವಾಸ, ಖಿಲಾಫತ್‌ನೊಂದಿಗೆ ನಿಷ್ಠೆ ಮತ್ತು ಖಲೀಫರ ಅನುಸರಣೆ ಇವುಗಳ ಬಹಳ ದೊಡ್ಡ ಉದಾಹರಣೆ ನಮ್ಮ ಅಬ್ಬಾ ನಮಗೆ ತೋರಿಸಿಕೊಟ್ಟು ಅದರಲ್ಲಿ ಸ್ಥಿರವಾಗಿರಲು ನಮಗೆ ಉಪದೇಶಿಸುತ್ತಿದ್ದರು. ನಾನು ನಾಝಿರ್ ಅಅ್‌ಲಾ ಹುದ್ದೆಗೆ ನಿಯಮಿತನಾದಾಗ ಅವರು ಬಹಳ ವಿನಯದಿಂದ ಜಮಾಅತಿನ ನಿಝಾಮಿಗೆ ಗೌರವ ನೀಡುತ್ತಾ ನನ್ನೊಂದಿಗೆ ಪ್ರತಿಯೊಂದು ರೀತಿಯಲ್ಲಿ ನಿಷ್ಠೆಯಿಂದಲೂ ಗೌರವದಿಂದಲೂ ವರ್ತಿಸುತ್ತಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ರಹ್‌ಮತ್‌ನೊಂದಿಗೆ ವರ್ತಿಸುವವನಾಗಲಿ. ಅವರ ಪದವಿಗಳನ್ನು ಉನ್ನತ ಗೊಳಿಸಲಿ. ಅವರ ಮಕ್ಕಳಿಗೆ ಸಹ ಅವರ ಒಳಿತುಗಳನ್ನು ಜಾರಿಯಲ್ಲಿರಿಸುವ ಭಾಗ್ಯವನ್ನು ಅಲ್ಲಾಹನು ದಯಪಾಲಿಸಲಿ – ಆಮೀನ್.

ಎರಡನೆಯ ಜನಾಝ ಖಲೀಫ ಅಬ್ದುಲ್ ಅಝೀಝ್ ಸಾಹಿಬ್, ನಾಯಿಬ್ ಅಮೀರ್ ಜಮಾಅತ್ ಕೆನಡಾ ಅವರದಾಗಿದೆ. ಅವರು ಜುಲಾಯಿ ದಿನಾಂಕ 9ರಂದು ತನ್ನ 84ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅತ್ಯಂತ ಮೃದು ಹೃದಯಿಯೂ ಎಲ್ಲರ ಪ್ರೀತಿಗೆ ಪಾತ್ರ, ಹಸನ್ಮುಖಿ, ತೀಕ್ಷ್ಣಮತಿ, ನಿಷ್ಠಾವಂತ ಮನುಷ್ಯರಾಗಿದ್ದರು. ಆರೋಗ್ಯ ಚೆನ್ನಾಗಿರದಿದ್ದರೂ ತಮ್ಮ ಹೊಣೆಗಾರಿಕೆಗಳನ್ನು ತನ್ನ ಕೊನೆಯುಸಿರು ತನಕ ಬಹಳ ಧೈರ್ಯದಿಂದ ನಿಭಾಯಿಸುತ್ತಿದ್ದರು. ಖಿಲಾಫತ್ ಬಗ್ಗೆ ಬಹಳ ಪ್ರೀತಿ ಮತ್ತು ಗೌರವಗಳಿದ್ದುವು. ಅಲ್ಲಾಹನ ಅನುಗ್ರಹದಿಂದ ಮೂಸಿ ಆಗಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ರಹ್ಮತ್‌ನೊಂದಿಗೆ ವರ್ತಿಸುವವನಾಗಲಿ. ಅವರ ಸಂಬಂಧಿಕರಿಗೆ ಸಹನೆಯನ್ನೂ ಧೈರ್ಯವನ್ನೂ ದಯಪಾಲಿಸಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸುವವರಾಗಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis***(atba)

*At Masjid Baithul Futhuh, London, UK. On 19-07-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

**Email**: *khutuba.kannada@gmail.com*

**You can find all the Sermons archived at**: www.alislam.org/friday-sermon